# ಪ್ರಳಯ ಬಂತೇ ?



ಬಂತು! ಬಂತೇ? ಬಂತು! ಬಂತೇ?...
‘ಪ್ರಳಯ’ ಬಂತೇ ಗೆಳೆಯರೇ?...
ಬಂತು ಮನಸಿಗೆ, ಕಂತೊ ಬುದ್ಧಿಗೆ
ಜಂತು ಬಾಳಿಗೆ, ಅಲ್ಲವೇ?...

‘ಸುಣ್ಣಕಣ್ಣಿಗೆ’ ಇರಲಿ ಪ್ರಳಯವು
ಬೆಣ್ಣೆಕೂದಲ ತಂತ್ರಕೂ
ಗಿರವಿ ಬಾಳಿಗೆ
ಇಲ್ಲ ನಾಚಿಕೆ, ಸುದ್ದಿಜಾಲಕೂ ಬಂತೆಲೊ!

ಕಳ್ಳಕಾಂಚನ ದೇವರಾಶ್ರಯ
ಹೊಲಸು ನಾರುವ ಕಚ್ಚೆಗೂ
ಇರಲಿ ಪ್ರಳಯವು ಹೊಟ್ಟೆಕಿಚ್ಚಿಗೆ
ಕೆಂಪು ಮಚ್ಚಿಗೆ ನಿಚ್ಚವೂ.

ಪ್ರಳಯವೆನ್ನಿರೊ ನುಂಗೋ ಬಾಳಿಗೆ
ಪರಡಿಯೊಳಗಿನ ತೂಕಕೆ;
ಪ್ರಳಯವೆನ್ನಿರೊ ಪದಕ ತಿನ್ನುವ
ಪರದೆ ಹಿಂದಿನ ಆಟಕೆ!

ವಜ್ರಮುಷ್ಟಿಗೆ ಪ್ರಳಯಬೇಕ್ಕೆ
ಕಪ್ಪು ಜೇಬಿಗೂ ಬೇಕಲೊ!
ದುಡಿತ ಮರೆತೂ ‘ದುಡ್ಡು’
ಗಳಿಸುವ ಸ್ವಿಸ್ ಬ್ಯಾಂಕಿನ ದೋಸ್ತಗೂ

ಪ್ರಳಯ ಬೇಕಿದೆ ‘ದ್ವೀಪ’
ಕೊಳ್ಳುವ ಭೂಪ ಸಂತತಿ ಅಳಿವಿಗೆ
ಪ್ರಳಯ ಬೇಕಿದೆ ನೀಚ
ಬುದ್ಧಿಯ, ನಾಚಿಕಿಲ್ಲದ ಬಾಳಿಗೆ

ಆಳುವರಸನೇ ‘ಪ್ರಳಯ’ನಾದರೆ
ಯಾವ ದೇವನು ಕಾವನೋ!
ಪ್ರಳಯ ಒಳಗಿದೆ, ಪ್ರಳಯ ಬಳಿಗಿದೆ
ಪ್ರಳಯ ಬಂತೇ ಗೆಳೆಯರೇ?

● **ವಿಷ್ಣು ನಾಯ್ಕ**

ಚಿತ್ರ: ಈಶ್ವರ ಬಡಿಗೇರ